ಕಲಿಯುವ ಕಲೆ...

# ಸುಂದರಬನ

೨



ಪ್ರ ಫೋಟೋ

**ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:**
'ಸುಂದರಬನ'ದಲ್ಲಿ ಖುಷಿ ಕಲಿಕಾ ಅನುಭವ ಪಡೆಯಲು ಆಯಾ ಪುಟಗಳಲ್ಲಿ ಕೊಟ್ಟಿರುವ 'ನಮ್ಮ ಆಶಯ'ವನ್ನು ಮೊದಲು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

ವಿದ್ಯಾರ್ಥಿ/ ವಿದ್ಯಾರ್ಥಿನಿಯ ಹೆಸರು :.......................................

ಶಾಲೆಯ ಹೆಸರು :.................................................................

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಜೂನ್ – ಜುಲೈ ೨೦೨೪–೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors

# ಕಥೆ ಕಟ್ಟೋಣ ಬನ್ನಿ




ಮುಕ್ತ ಕಲಿಕೆಗಾಗಿ

**ನಮ್ಮ ಆಶಯ :**
ಮಕ್ಕಳು ಮೇಲಿನ ಚಿತ್ರಗಳನ್ನು ಗಮನಿಸಲಿ. ತಮ್ಮದೇ ಆದ ರೀತಿಯಲ್ಲಿ ಕಥೆ ಕಟ್ಟಿ ಹೇಳಲು ಪ್ರಯತ್ನಿಸಲಿ. ನಂತರ ತಾವು ಆಡಿರುವ ಆಟಗಳ ಕುರಿತು ಮಾತನಾಡಲಿ.

| ಭಾಷಾ ಚೌಕ |
| --- |
| **ಗಾಳಿಪಟ – Kite (ಕೈಟ್)** |
| **ದಾರ – Thread (ತ್ರೆಡ್)** |
| **ಕೋಲು – Stick (ಸ್ಟಿಕ್)** |

# ಜಾಲದಾಟ




| ಭಾಷಾ ಚೌಕ |
| --- |
| **ಗುಬ್ಬಿ – Sparrow** (ಸ್ಪ್ಯಾರೋ) |
| **ಗೂಡು – Nest** (ನೆಸ್ಟ್) |

**ನಮ್ಮ ಆಶಯ:**
ಗುಬ್ಬಿ ತನ್ನ ಗೂಡಿಗೆ ಹೋಗಬೇಕಾಗಿದೆ, ಅದಕ್ಕೆ ಮಕ್ಕಳು ದಾರಿ ತೋರಿಸಲಿ.

ಮುಕ್ತ ಕಲಿಕೆಗಾಗಿ


# ಚುಕ್ಕಿಯಾಟ




**ನಮ್ಮ ಆಶಯ:**
ಚುಕ್ಕಿಚಿತ್ರದಲ್ಲಿ 1ರಿಂದ 25ರವರೆಗಿನ ಸಂಖ್ಯೆಗಳನ್ನು ಮಕ್ಕಳು ಕ್ರಮವಾಗಿ ಸೇರಿಸಿ, ಬಣ್ಣ ಹಚ್ಚಲಿ. ನಂತರ ಮೂಡುವ ಚಿತ್ರದ ಕುರಿತು ಮಕ್ಕಳು ಮಾತನಾಡಲಿ.

| ಭಾಷಾ ಚೌಕ |
| --- |
| **ಕುದುರೆ – Horse** (ಹಾರ್ಸ್) |
| **ಬಾಲ – Tail** (ಟೇಲ್) |
| **ಗೊರಸು – Hoof** (ಹೂಫ್) |

# ಬಣ್ಣದಾಟ



ಖುಷಿ ಕಲಿಕೆಗಾಗಿ

**ನಮ್ಮ ಆಶಯ:**

ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಲಿ. ಅಲ್ಲಿರುವ ಆಕೃತಿಗಳನ್ನು ಶಿಕ್ಷಕರ/ಪಾಲಕರ ಸಹಾಯದಿಂದ ಗುರುತಿಸಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಲಿ. ಖಾಲಿ ಜಾಗದಲ್ಲಿ ಇಂತಹ ಆಕೃತಿಗಳನ್ನು ಬಳಸಿ, ವಾಹನಗಳ ಚಿತ್ರಗಳನ್ನು ಬರೆಯಲು ಪ್ರಯತ್ನಿಸಲಿ.



## ತುಂಟ ಪುಟ್ಟಿ

ಮನೆಯಲಿ ಕಿರಿಕಿರಿ ಕೊಡುವಳು ಪುಟ್ಟಿ
ಮಾಡುತಲಿದ್ದರೆ ಅಮ್ಮನು ರೊಟ್ಟಿ

ಮಲಗಿದ ನಾಯಿಯ ಬಾಲವ ಮೆಟ್ಟಿ
ಗರ್ ಗುರ್ ಎನ್ನಲು ನಗುವಳು ಪುಟ್ಟಿ

ಅಕ್ಕರೆ ಬೆಕ್ಕಿನ ಮೈಯನು ತಟ್ಟಿ
ತಿನ್ನಲು ಇಡುವಳು ಬೆಣ್ಣೆ ರೊಟ್ಟಿ

ತರುವಳು ಚಕಚಕ ನಲ್ಲಿಯ ನೀರು
ಕೇಳಳು ಮನೆಯಲಿ ಹೇಳಿದರಾರು





ಅಮ್ಮನು ಮಾಡಿದ ಕಟ್ಟಿನ ಸಾರು
ಕುಡಿಯಿತು ಗಟಗಟ ಪುಟ್ಟಿಯ ನೀರು

ಉರುಳಿತು ಆಗಲೆ ಹಾಲಿನ ಗಿಂಡಿ
ಒಣಗಿತು ಕೂಡಲೆ ಪುಟ್ಟಿಯ ಸೊಂಡಿ

ಓಡಿದಳಾಗಲೆ ಪುಟ್ಟಿಯು ಹೊರಗೆ
ನಿಲ್ಲದೆ ತುಂಟಿಯು ಅಮ್ಮನ ಕರೆಗೆ

ಕುಳಿತಳು ಹೊರಗಡೆ ಹಸಿದರು ಹೊಟ್ಟೆ
ಅಪ್ಪನು ಕರೆಯಲು ಬಂದಳು ಪುಟ್ಟಿ


– ಪ. ಗು. ಸಿದ್ಧಾಪುರ

ಆಕರ: ಮುಳುಗದ ಸೂರ್ಯ
ಪ್ರಕಾಶನ: ಕನ್ನಡ ಸಾಹಿತ್ಯ ಪರಿಷತ್ತು

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಪ್ರಾಸ ಪದ್ಯವನ್ನು ಕಲಿತು ಹಾಡಲಿ. ನಂತರ ಚಿತ್ರಗಳಿಗೆ ಬಣ್ಣ ಹಚ್ಚಲಿ.

# ಕಣ್ಣುರುಕು






ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮೇಲಿನ ಎರಡೂ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಇದ್ದರೂ ಅವುಗಳಲ್ಲಿ ಎಂಟಕ್ಕಿಂತಲೂ ಹೆಚ್ಚು ವ್ಯತ್ಯಾಸಗಳಿವೆ. ಮಕ್ಕಳು ಅವುಗಳನ್ನು ಗುರುತಿಸಿ, ಬಣ್ಣ ಹಚ್ಚಲಿ. ನಂತರ ಬೇರೊಂದು ಹಾಳೆಯಲ್ಲಿ ತಮಗಿಷ್ಟವಾದ ಪ್ರಾಣಿಗಳ ಚಿತ್ರಗಳನ್ನು ಬಿಡಿಸಿ, ಚಿತ್ರಗಳಿಗೆ ಸೂಕ್ತವಾದ ಬಣ್ಣ ಹಚ್ಚಲಿ.

**ಭಾಷಾ ಚೌಕ**

**ಸೂರ್ಯ – Sun** (ಸನ್)
**ಪ್ರಾಣಿ – Animal** (ಆ್ಯನಿಮಲ್)
**ಕೊಟ್ಟಿಗೆ – Crib** (ಕ್ರಿಬ್)

# ನೆರಳಿನಾಟ




**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರಗಳನ್ನು ಗುರುತಿಸಿ, ಹೆಸರು ಹೇಳಲಿ. ಅವುಗಳ ಪಕ್ಕದಲ್ಲಿ ನೆರಳುಗಳು ಬಿದ್ದಿವೆ. ಆದರೆ ಅವುಗಳು ಅದಲು ಬದಲು ಆಗಿವೆ. ಅವುಗಳನ್ನು ಸರಿಯಾದವುಗಳಿಗೆ ಗೆರೆ ಎಳೆದು ಗುರುತಿಸಲಿ. ನಂತರ ಅವುಗಳ ಆಹಾರ, ವಾಸಸ್ಥಳ ಇತ್ಯಾದಿ ಕುರಿತು ಮಕ್ಕಳು ತರಗತಿಯಲ್ಲಿ ಮಾತನಾಡಲಿ.

**ಭಾಷಾ ಚೌಕ**

**ಕೋಳಿ** – **Hen** (ಹೆನ್)
**ಕೊಕ್ಕು** – **Beak** (ಬೀಕ್)
**ಆಕಳು** – **Cow** (ಕೌ)
**ಕೊಂಬು** – **Horn** (ಹಾರ್ನ್)


# ಚುಕ್ಕಿಯಾಟ



**ನಮ್ಮ ಆಶಯ:**
ಮಕ್ಕಳು ಚುಕ್ಕಿಚಿತ್ರದಲ್ಲಿ 1ರಿಂದ 35ರವರೆಗಿನ ಸಂಖ್ಯೆಗಳನ್ನು ಕ್ರಮವಾಗಿ ಸೇರಿಸಲಿ. ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಮೂಡುವ ಚಿತ್ರದ ಕುರಿತು ಮಾತನಾಡಲಿ.



# ಜಾಲದಾಟ



| ಭಾಷಾ ಚೌಕ | |
|---|---|
| ಮೊಲ | – **Rabbit** (ರ‍್ಯಾಬಿಟ್) |
| ಗಜ್ಜರಿ | – **Carrot** (ಕ್ಯಾರಟ್) |

**ನಮ್ಮ ಆಶಯ:**
ಮೊಲ, ಒಂದೇ ಆಕೃತಿಯ ಮೂಲಕ ಹಾದು ಗಜ್ಜರಿಯನ್ನು ತಿನ್ನಲು ಹೋಗಬೇಕಾಗಿದೆ. ಮಕ್ಕಳು ದಾರಿ ತೋರಿಸಿ ಸಹಾಯ ಮಾಡಲಿ.

# ಬಣ್ಣದಾಟ




ಸಾಂದರ್ಭಿಕ ಚಿತ್ರ

**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಿ, ಯಾವ ಹಬ್ಬ ಎಂದು ಹೇಳಲಿ. ನಂತರ ಕೊಟ್ಟಿರುವ ಖಾಲಿ ಜಾಗದಲ್ಲಿ ಈ ಹಬ್ಬದಲ್ಲಿ ಮಾಡುವ ತಿಂಡಿ, ತಿನಿಸುಗಳ ಚಿತ್ರಗಳನ್ನು ಬರೆದು ಬಣ್ಣ ಹಚ್ಚಲಿ.

**ಭಾಷಾ ಚೌಕ**

**ಪೂಜೆ – Worship** (ವರ್ಷಿಪ್)
**ಹಾಲು – Milk** (ಮಿಲ್ಕ್)
**ಹಬ್ಬ – Festival** (ಫೆಸ್ಟಿವೆಲ್)

# ಕಲಾ ಕ್ಷೇತ್ರ...




ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಚಿತ್ರವನ್ನು ಗಮನಿಸಿ, ಬಣ್ಣ ಹಚ್ಚಲಿ. ನಂತರ ತಾವು ನೋಡಿರುವ ವಾಹನಗಳನ್ನು ಖಾಲಿ ಇರುವ ಜಾಗದಲ್ಲಿ ಬರೆದು, ಬಣ್ಣ ಹಚ್ಚಲಿ. ಅನಂತರ ಅವುಗಳ ಕುರಿತು ಮಾತನಾಡಲು ಪ್ರೋತ್ಸಾಹಿಸಿ.

| ಭಾಷಾ ಚೌಕ |
| --- |
| **ರೈಲು – Rail** (ರೈಲ್) |
| **ಬೋಗಿ – Coach** (ಕೋಚ್) |
| **ಹೊಗೆ – Smoke** (ಸ್ಮೋಕ್) |

# ಸಂಖ್ಯಾ ಬಣ್ಣದಾಟ



**ಸೂಚನಾ ಪಟ್ಟಿ**

**1** – ಕೇಸರಿ ಬಣ್ಣ
**2** – ಕಡು ಹಳದಿ ಬಣ್ಣ
**3** – ಹಸಿರು ಬಣ್ಣ
**4** – ಆಕಾಶ ನೀಲಿ ಬಣ್ಣ
**5** – ಕಡು ನೀಲಿ ಬಣ್ಣ
**6** – ಕೆಂಪು ಬಣ್ಣ
**7** – ಕಪ್ಪು ಬಣ್ಣ
**8** – ಬೂದು ಬಣ್ಣ
**9** – ಬಿಳಿ ಬಣ್ಣ

**ಭಾಷಾ ಚೌಕ**

ಮೋಡ – **Cloud** (ಕ್ಲೌಡ್)
ಟ್ರಕ್ಕು – **Tipper** (ಟಿಪ್ಪರ್)
ಗಾಲಿ/ಚಕ್ರ – **Wheel** (ವೀಲ್)

**ನಮ್ಮ ಆಶಯ:**
ಮಕ್ಕಳು ಸೂಚನಾ ಪಟ್ಟಿಯನ್ನು ಅನುಸರಿಸಿ, ಕೊಟ್ಟಿರುವ ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಚಿತ್ರದಲ್ಲಿರುವ ವಾಹನದ ಕುರಿತು ಮಾತನಾಡಲಿ. ಅನಂತರ ತಾವು ಇಂತಹ ವಾಹನದ ಆಟಿಕೆಗಳ ಜೊತೆ ಆಟ ಆಡಿದರ ಕುರಿತು ಮಾತನಾಡಲಿ.

# ಬಣ್ಣದಾಟ





ಸಾಂದರ್ಭಿಕ ಚಿತ್ರಗಳು


**ನಮ್ಮ ಆಶಯ:**

ಮಕ್ಕಳು ಮೇಲಿನ ಸನ್ನಿವೇಶವನ್ನು ಗಮನಿಸಿ, ಬಣ್ಣ ಹಚ್ಚಲಿ. ಬಕ್ರೀದ್ ಹಬ್ಬವನ್ನು ನಿಮ್ಮ ಮನೆ/ಊರು/ಸ್ನೇಹಿತರ ಮನೆಗಳಲ್ಲಿ ಹೇಗೆ ಆಚರಣೆ ಮಾಡುತ್ತಾರೆ ಎಂಬುದನ್ನು ಕುರಿತು ತರಗತಿಯಲ್ಲಿ ಮಾತನಾಡಲಿ. ಖಾಲಿ ಇರುವ ಜಾಗದಲ್ಲಿ ಈ ಹಬ್ಬಕ್ಕೆ ಸಂಬಧಿಸಿದ ತಮಗಿಷ್ಟವಾದ ಚಿತ್ರ ಬರೆಯಲಿ.

**ಭಾಷಾ ಚೌಕ**

**ಮಸೀದಿ – Mosque** (ಮಾಸ್ಕ್)
**ಆಚರಣೆ – Celebration** (ಸೆಲಿಬ್ರೇಷನ್)

# ಮಂಡಲಕಲೆ



ಖುಷಿ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಮೊದಲು ಚಿತ್ರವನ್ನು ಗಮನವಿಟ್ಟು ನೋಡಲಿ. ನಂತರ ತಮಗಿಷ್ಟವಾದ ಬಣ್ಣಗಳನ್ನು ತೆಗೆದುಕೊಂಡು ಪ್ರತಿಯೊಂದು ಭಾಗಕ್ಕೂ ಪ್ರತ್ಯೇಕವಾಗಿ ಹಚ್ಚುತ್ತಾ ಹೋಗಲಿ. ಈ ಚಟುವಟಿಕೆಯನ್ನು ಒಂದೇ ಸಲಕ್ಕೆ ಮುಗಿಸಬೇಕೆನ್ನುವ ಒತ್ತಾಯವಿಲ್ಲ. ತಮ್ಮ ಬಿಡುವಿನ ವೇಳೆಯಲ್ಲಿಯೂ ಸ್ವಲ್ಪ ಸ್ವಲ್ಪ ಮಾಡಬಹುದು. ಆದರೆ ಇದನ್ನು ಮಾಡುವಾಗ ಆದಷ್ಟು ಇದನ್ನೇ ಗಮನಿಸಲಿ.

# ಎಣಿಕೆಯಾಟ




ಖುಷಿ ಕಲಿಕೆಗಾಗಿ


______________

**ನಮ್ಮ ಆಶಯ:**
ಮಕ್ಕಳು ಚಿತ್ರದಲ್ಲಿ ಎಷ್ಟು ಬೆಕ್ಕುಗಳಿವೆ ಎಂಬುದನ್ನು ಎಣಿಕೆಮಾಡಿ ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಲಿ. ಚಿತ್ರದ ಕುರಿತು ಮಾತನಾಡಲಿ.

| ಭಾಷಾ ಚೌಕ |
| --- |
| **ಬೆಕ್ಕು – Cat** (ಕ್ಯಾಟ್) |
| **ಕಾಣಿಕೆ – Gift** (ಗಿಫ್ಟ್) |

# ಹುಡುಕುವಾಟ





ಮಿಷ ಕಲಿಕೆಗಾಗಿ

**ನಮ್ಮ ಆಶಯ:**
ಕೆಳಗಿನ ಆಯತದಲ್ಲಿರುವ ವಸ್ತುಗಳು ಮೇಲಿನ ಚಿತ್ರದಲ್ಲಿ ಅಡಗಿವೆ. ಅವುಗಳನ್ನು ಮಕ್ಕಳು ಗೆರೆ ಎಳೆದು ಗುರುತಿಸಲಿ. ನಂತರ ಚಿತ್ರಕ್ಕೆ ಸೂಕ್ತವಾದ ಬಣ್ಣ ಹಚ್ಚಲಿ. ತಾವು ಆಡಿರುವ ಆಟಗಳ ಕುರಿತು ಮಾತನಾಡಲಿ.


**ಭಾಷಾ ಚೌಕ**

**ಕತ್ತರಿ – Scissor** (ಸಿಸ್ಸರ್)

# ಅಕ್ಷರದಾಟ



ಖುಷಿ ಕಲಿಕೆಗಾಗಿ





**ಜಿರಾಫೆ ಮರಿ**
**ನೋಡಿ ತೆಂಗಿನ ಗರಿ**
**ಚಾಚಿಚಾಚಿ ಕತ್ತು**
**ಆಯಿತು ಸುಸ್ತುಸುಸ್ತು!**


**– ಶಿಹೊಂ**

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಚಿತ್ರವನ್ನು ಗಮನಿಸಿ, ಜಿರಾಫೆ ಮರಿ ಮೇಲಿನ ವೃತ್ತಗಳಲ್ಲಿ ಎರಡು ಅಕ್ಷರದ ಸರಳ ಪದಗಳನ್ನು ಬರೆದು ಬಣ್ಣ ಹಚ್ಚಲಿ. ಉದಾಹರಣೆಯನ್ನು ಗಮನಿಸಲಿ. ನಂತರ ಪ್ರಾಸಪದ್ಯವನ್ನು ಕಲಿತು ಹಾಡಲಿ.

| ಭಾಷಾ ಚೌಕ |
| --- |
| **ಜಿರಾಫೆ – Giraffe** (ಜಿರಾಫ್) |

# ಪೂರ್ಣದೆಡೆಗೆ









| ಭಾಷಾ ಚೌಕ |
|---|
| ಗಜ್ಜರಿ – **Carrot** (ಕ್ಯಾರಟ್) |
| ಸ್ಟ್ರಾಬರಿ – **Strawberry** (ಸ್ಟ್ರಾಬರಿ) |
| ಸೇಬು – **Apple** (ಆ್ಯಪಲ್) |

**ನಮ್ಮ ಆಶಯ:**
ಅಪೂರ್ಣ ಆಗಿರುವ ಚಿತ್ರಗಳನ್ನು ಮಕ್ಕಳು ಪೂರ್ಣಗೊಳಿಸಿ, ಬಣ್ಣ ಹಚ್ಚಲಿ. ನಂತರ ಮೂಡುವ ಚಿತ್ರಗಳನ್ನು ಗುರುತಿಸಿ ಹೇಳಲಿ. ತಮಗೆ ಇಷ್ಟವಾಗುವ ತಿಂಡಿ ಯಾವುದು ಮತ್ತು ಅದಕ್ಕೆ ಯಾವ ಯಾವ ತರಕಾರಿಗಳನ್ನು ಬಳಸುತ್ತಾರೆ. ಅದರ ಕುರಿತು ಮಾತನಾಡಲು ಪ್ರೋತ್ಸಾಹಿಸಿ.

# ಅಕ್ಷರದಾಟ



**ನಮ್ಮ ಆಶಯ:**
ಅಪೂರ್ಣ ಆಗಿರುವ ಅಕ್ಷರಗಳನ್ನು ಮಕ್ಕಳು ಪೂರ್ಣಗೊಳಿಸಲಿ.
ಈ ಅಕ್ಷರಗಳಿಂದ ಸರಳ ಪದಗಳನ್ನು ರಚಿಸಿ, ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ.

# ಬಣ್ಣದಾಟ






**ನಮ್ಮ ಆಶಯ:**
ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಿ, ಚಿತ್ರಕ್ಕೆ ಬಣ್ಣ ಹಚ್ಚಲಿ. ತಮ್ಮ ಮನೆ/ಶಾಲಾ ಅಂಗಳದಲ್ಲಿ ಅಥವಾ ಮಣ್ಣಿನ ಮಡಿಕೆಗಳಲ್ಲಿ ಕೆಲವು ತರಹದ ಬೀಜಗಳನ್ನು ಹಾಕಿ, ಬೆಳೆ ಬೆಳೆಯಲಿ. ನಂತರ ಕೊಟ್ಟಿರುವ ಖಾಲಿ ಜಾಗದಲ್ಲಿ ಮಕ್ಕಳು ತೋಟಗಾರಿಕೆಗೆ, ಹೊಲ, ಗದ್ದೆಗಳಿಗೆ ಸಂಬಂಧಿಸಿದ ಚಿತ್ರವನ್ನು ಬರೆದು ಬಣ್ಣ ಹಚ್ಚಲಿ.

**ಭಾಷಾ ಚೌಕ**

ಕಾಳು – **Grain** (ಗ್ರೆಯ್ನ್)
ಬೀಜ – **Seed** (ಸೀಡ್)
ಸಸ್ಯ – **Plant** (ಪ್ಲಾನ್ಟ್)

# ಕಣ್ಣುರುಕು





ಮುಕ್ತ ಕಲಿಕೆಗಾಗಿ


**ನಮ್ಮ ಆಶಯ:**
ಮೇಲಿನ ಎರಡೂ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಇದ್ದರೂ ಅವುಗಳಲ್ಲಿ ಎಂಟಕ್ಕಿಂತಲೂ ಹೆಚ್ಚು ವ್ಯತ್ಯಾಸಗಳಿವೆ. ಮಕ್ಕಳು ಅವುಗಳನ್ನು ಗುರುತಿಸಲಿ. ನಂತರ ಚಿತ್ರಗಳಿಗೆ ಸೂಕ್ತವಾದ ಬಣ್ಣ ಹಚ್ಚಲಿ.

# ನಮ್ಮ ಚಿತ್ರ – ನಿಮ್ಮ ಕಥೆ
## (ಆಧಾರಿತ ಚಟುವಟಿಕೆ)




1. ನಿಮ್ಮ ಮನೆಯಲ್ಲಿ ಬೆಕ್ಕನ್ನು ಸಾಕಿದ್ದೀರಾ?
2. ಅದರ ಜೊತೆ ಆಟವಾಡಿದ್ದೀರಾ?
3. ನಿಮ್ಮ ಮನೆಯಲ್ಲಿ ಯಾವ ಯಾವ ಪ್ರಾಣಿಗಳನ್ನು ಸಾಕಿದ್ದೀರಿ?
4. ಅವುಗಳಲ್ಲಿ ನಿಮಗೆ ಇಷ್ಟವಾದ ಪ್ರಾಣಿ ಯಾವುದು ಮತ್ತು ಏಕೆ?
5. ನಿಮ್ಮ ಮನೆಯಲ್ಲಿನ ಬೆಕ್ಕು ಯಾವ ರೀತಿ ತುಂಟಾಟವನ್ನು ಮಾಡುತ್ತದೆ?
6. ನೀವು ಅದಕ್ಕೆ ಯಾವ ಯಾವ ಆಹಾರವನ್ನು ಹಾಕುತ್ತೀರಿ?







# ಚಿತ್ರಕಥಾಪಟ
## (ಆಧಾರಿತ ಚಟುವಟಿಕೆ)

1. ನೀವು ಕಾಡು ಪ್ರಾಣಿಗಳನ್ನು ನೋಡಿದ್ದೀರಾ?
2. ಯಾವ ಯಾವ ಪ್ರಾಣಿಗಳನ್ನು ನೋಡಿದ್ದೀರಾ?
3. ನಿಮಗೆ ಅವುಗಳಲ್ಲಿ ಯಾವ ಪ್ರಾಣಿಗಳು ಇಷ್ಟ ಮತ್ತು ಏಕೆ?
4. ನಿಮಗಿಷ್ಟದ ಪ್ರಾಣಿಗಳ ಆಹಾರದ ಕುರಿತು ಮಾತನಾಡಿರಿ.
5. ಅವುಗಳು ಹೇಗೆ ಕೂಗುತ್ತವೆ?
6. ಕಥೆಯಲ್ಲಿ ಜಿಂಕೆಮರಿ ಹೇಗೆ ಸ್ಪರ್ಧೆಯನ್ನು ಗೆದ್ದಿತು ಆಲೋಚಿಸಿ ಹೇಳಿ.

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಹೊಸ ರಾಜಕುಮಾರ' ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕಥೆಯನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.




# ಉಭಯಭಾಷಾ ಚಿತ್ರಕಥಾಪಟ
## (ಆಧಾರಿತ ಚಟುವಟಿಕೆ)

1. ನೀವು ಕರಡಿಗಳನ್ನು ನೋಡಿದ್ದೀರಾ?

2. ನೋಡಿದ್ದರೆ ಎಲ್ಲಿ ನೋಡಿದ್ದೀರಿ?

3. ಕರಡಿ ಯಾವ ಆಹಾರವನ್ನು ಸೇವಿಸುತ್ತದೆ?

4. ಕರಡಿಯ ವಾಸಸ್ಥಳ ಮತ್ತು ಕೂಗುವಿಕೆಯ ಬಗ್ಗೆ ಮಾತನಾಡಲಿ.

5. ಕರಡಿಯ ಕುಣಿತವನ್ನು ನೋಡಿದ್ದೀರಾ? ನೋಡಿದ್ದರೆ ಅದರ ಕುಣಿತವನ್ನು ಕುಣಿಯಲು ಪ್ರಯತ್ನಿಸಿ.

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಎರಡು ಕರಡಿಗಳು' ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕಥೆಯನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.






# ಕವನ ಚಿತ್ರಪಟ
## (ಆಧಾರಿತ ಚಟುವಟಿಕೆ)

1. ನಿಮಗೂ ತಂಗಿ/ತಮ್ಮ ಅಂದ್ರೆ ಇಷ್ಟಾನಾ?

2. ನಿಮ್ಮ ತಂಗಿ/ತಮ್ಮ ತುಂಬಾ ಹಠವನ್ನು ಮಾಡುತ್ತಾರಾ?

3. ಯಾವ ಯಾವ ವಿಷಯಗಳಿಗೆ ಹಠ ಮಾಡುತ್ತಾರೆ?

4. ನಿಮ್ಮ ತಂಗಿ/ತಮ್ಮನನ್ನು ಹೇಗೆ ಸಮಾಧಾನ ಪಡಿಸುವಿರಿ?

5. ನೀವು ತಂಗಿ/ತಮ್ಮನ ಜೊತೆ ಜಗಳವಾಡಿದ್ದೀರಾ?

6. ಜಗಳವಾಡುವ ಸಮಯದಲ್ಲಿ ಯಾರು ಬಂದು ಬಿಡಿಸುತ್ತಾರೆ?

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ನನ್ನ ತಂಗಿ' ಕವನ ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕವನವನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಕಣ್ಣರಳಿಸಿ ನೋಡು








ಮುಕ್ತ ಕಲಿಕೆಗಾಗಿ


# ಸಂಖ್ಯಾ ಜಾಲದಾಟ




ಮಿಶ್ರ ಕಲಿಕೆಗಾಗಿ

**ನಮ್ಮ ಆಶಯ:**
ಕಪ್ಪೆ ಹುಳುಗಳನ್ನು ತಿನ್ನಲು ಹೋಗಬೇಕಾಗಿದೆ. ಅದಕ್ಕೆ ಮಕ್ಕಳು ಬಿಟ್ಟ ಅಂಕಿಗಳನ್ನು ತುಂಬಿ ಸರಿಯಾದ ದಾರಿ ತೋರಿಸಿ ಸಹಾಯ ಮಾಡಲಿ. ನಂತರ ಕಪ್ಪೆಯ ಆಹಾರ, ವಾಸಸ್ಥಳ, ಕೂಗು ಇತ್ಯಾದಿಗಳ ಕುರಿತು ಮಾತನಾಡಲಿ.

# ಯೋಗ ದಿನಾಚರಣೆಯ ಶುಭಾಶಯಗಳು



ಸಾಂದರ್ಭಿಕ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರಗಳನ್ನು ಗಮನಿಸಲಿ. ನಂತರ ಶಿಕ್ಷಕರ ಸಹಾಯದಿಂದ ಯೋಗ ಮತ್ತು ಯೋಗದಿಂದ ಆಗುವ ಉಪಯೋಗಗಳನ್ನು ತಿಳಿದುಕೊಳ್ಳಲಿ.

# ನೋಡು – ಮಾಡು







**ನಮ್ಮ ಆಶಯ:**
ಮಕ್ಕಳು ಮೇಲೆ ಎಲೆಗಳಿಂದ ಮಾಡಿದ ವಿವಿಧ ವಾಹನಗಳ ಆಕರಗಳನ್ನು ನೋಡಲಿ. ನಂತರ ತಾವೂ ಕೂಡ ತಮ್ಮ ಪರಿಸರದಲ್ಲಿ ಸಿಗುವ ಎಲೆ, ಕಡ್ಡಿ, ಬೀಜ ಇತ್ಯಾದಿಗಳನ್ನು ಬಳಸಿ ವಿವಿಧ ಆಕರಗಳನ್ನು ಮಾಡಿ ಆನಂದಿಸಲಿ.

ಇಲ್ಲಿನ ಕೆಲವು ಚಿತ್ರಗಳನ್ನು ವಿವಿಧ ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.

ನಮ್ಮ ಆಶಯ:
೨ನೇ ತರಗತಿಯ ಮಕ್ಕಳಿಗಾಗಿಯೇ ವಿಶೇಷವಾಗಿ ರೂಪಿಸಲಾದ ‘ಸುಂದರಬನ’ದಲ್ಲಿನ ಚಟುವಟಿಕೆ – ಆಟ ಇತ್ಯಾದಿಗಳೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ಕನ್ನಡ – ಪರಿಸರ ಅಧ್ಯಯನ – ಗಣಿತ ವಿಷಯಗಳಿಗೆ ಪೂರಕವಾಗಿ ರೂಪುಗೊಂಡಿವೆ ಎಂಬುದನ್ನು ತಾವು ಗಮನಿಸಬೇಕು.


ಸಂಪರ್ಕ ಮಾಹಿತಿ:
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬, ‘ಪುಷ್ಪಾಂಜಲಿ’
೩ನೇ ಅಡ್ಡರಸ್ತೆ, ಶಿವಗಿರಿ
ಧಾರವಾಡ – ೫೮೦ ೦೦೭
ಮೊ: ೯೯೮ ೬೬೬ ೧೦೫೫
dhwanitrust@gmail.com
www.dhwanitrust.org


ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.